1	2	3	4	5	6
25	SULYA KASABA	RETAINING WALLS AT KANDADKA BRIDGE AT SULLIA KASABA VILLAGE	01-02	ZPE	2 000
26	YENEKALLU	IMPTS TO FISH POND FROM ADLFJAD TO KAVU TO ENEKALLU VILLAGE	01-02	ZPE	2 000
27	IVATHOKALU	CONST OF BRIDGE AT PANDIGADDE OF IV ATHOKALU VILLAGE	01-02	ZPE	3 000
28	SULYA	ASPHALT TO PUMP HOUSE ROAD IN SUKLLYA TOWN	02-03	ZPE	1.500
29	BETTAMPADI	CONST TO CULVERT AND ASPHALTING TO BETTAMPADI OLD GATE ROAD IN SULLY TO	02-03	ZPE	2 000
30	MANDE KOLU	DEP OF MAVAJI SHIV AJINAGAR ROAD AT MANDE KOLU VILLAGE.	03-04	ZPE	4 00

GRAND TOTAL 30 WORKS 103 800, 26 830, 77,320, 7 500

ಐ ಆರ್ ಪಾಲಿಟೆಕ್ನಿಕ್ ಮೂಲಕ ಲಗ್ಗೆರೆಗೆ ಸೇರುವ ಮುಖ್ಯರಸ್ತೆಯ ಡಾಂಬರೀಕರಣದ ಬಗ್ಗೆ

4 (19) ಶ್ರೀ ಅಶೋಕ್ ಆರ್ (ಉತ್ತರಹಳ್ಳಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಾಸರಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆಯಿಂದ (ಸೋನಾಲ್ ಗಾರ್ಮೆಂಟ್ಸ್ ಹತ್ತಿರದಿಂದ ಐ ಆರ್ ಪಾಲಿಟೆಕ್ನಿಕ್ ಮೂಲಕ ಲಗ್ಗೆರೆ ಮುಖ್ಯ ರಸ್ತೆಗೆ ಸೇರುವ ರಸ್ತೆಯು) ಅತ್ಯಂತ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸದರಿ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ಜನರು ಹಾಗೂ ವಾಹನಗಳು ಓಡಾಡುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ದುರಸ್ಥಿಗೊಳಿಸಿ ಡಾಂಬರೀಕರಣಗೊಳಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಡಿ ಕೆ ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಹೌದು

ಇ) ನಗರ ಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು

ಹೊರ ವರ್ತುಲ ರಸ್ತೆಯ ಡಾಂಬರೀಕರಣದ ಬಗ್ಗೆ

5 (20) ಶ್ರೀ ಆರ್ ಅಶೋಕ್, ಎಂ ಎಲ್ಎ (ಉತ್ತರಹಳ್ಳಿ) ಮಾನ್ಯ ಬೆಂಗಳೂರು ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂಠೀರವ ಸ್ಟುಡಿಯೋದ ಹತ್ತಿರ ಹಾದು ಹೋಗುವ ಹೊರ ವರ್ತುಲ ರಸ್ತೆಯಿಂದ ಸುಭಾಷ್ ಚಂದ್ರ ಬೋಸ್ ವೃತ್ತದಿಂದ ಆರಂಭವಾಗಿ ಜಾಲಹಳ್ಳಿ ಕ್ರಾಸ್‌ಗೆ ಅಂದರೆ ಎನ್ ಹೆಚ್-4 ಗೆ ಸೇರುವ ರಸ್ತೆಯ ಡಾಂಬರೀಕರಣಕ್ಕೆ ಈ ಹಿಂದೆ ಸುಮಾರು ರೂ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರೂ ರಸ್ತೆಯು ಪೂರ್ತಿ ಡಾಂಬರೀಕರಣ ವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಸದರಿ ರಸ್ತೆಯು ಪೂರ್ಣ ಡಾಂಬರೀಕರಣವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಬೆಂಗಳೂರು ಅಭಿವೃದ್ಧಿ ಸಚಿವರು)

ಅ) ಕಂಠೀರವ ಸ್ಟುಡಿಯೋ ಹತ್ತಿರದ ವರ್ತುಲ ರಸ್ತೆಯಿಂದ (ಸುಭಾಷ್‌ಚಂದ್ರಭೋಸ್ ವೃತ್ತ) ಜಾಲಹಳ್ಳಿ ವೃತ್ತದವರೆಗೆ (ಎನ್ ಹೆಚ್-4) ಜೋಡಿ ರಸ್ತೆಯ ಉದ್ದ 3 20 ಕಿ ಮೀ ಗಳು ಇದರಲ್ಲಿ ವರ್ತುಲ ರಸ್ತೆಯಿಂದ ಲಗ್ಗೆರೆ ಮುಖ್ಯ ರಸ್ತೆಯವರೆಗೆ 1 30 ಕಿ ಮೀ ಜೋಡಿ ರಸ್ತೆಗೆ ಡಾಂಬರೀಕರಣ ಮಾಡಲು ಒಟ್ಟು 33 00 ಲಕ್ಷ ರೂ ಗಳಿಗೆ ಅಂದಾಜುಗಳು ಮಂಜೂರಾಗಿದ್ದು, ಈ ಕೆಲಸವನ್ನು ಮಾಡಿ ಮುಗಿಸಲಾಗಿದೆ

ಆ) ಉಳಿದ ಭಾಗದ ರಸ್ತೆ ಅಂದರೆ ಲಗ್ಗೆರೆ ಮುಖ್ಯ ರಸ್ತೆಯಿಂದ ಜಾಲಹಳ್ಳಿ ವೃತ್ತದವರೆಗೆ 1 90 ಕಿ ಮೀ ಉದ್ದದ ರಸ್ತೆಯನ್ನು ಡಾಂಬರೀಕರಣ ಮಾಡಲು ಮುಂದಿನ ವರ್ಷದ ಅನುದಾನದಲ್ಲಿ ಅಳವಡಿಸಿಕೊಂಡು ಕಾರ್ಯಗತಗೊಳಿಸಲು ಕ್ರಮ ಜರುಗಿಸಲಾಗುವುದು

ರಾಜ್ಯದಲ್ಲಿ ಜಾರಿಗೆ ಬಂದಿರುವ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯ ನ್ಯೂನತೆಗಳ ಬಗ್ಗೆ

6 (183) ಶ್ರೀ ಆತ್ಮಾನಂದ ಎಂ ಎಸ್ (ಮಂಡ್ಯ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾರಿಗೆ ತರಲಾಗಿರುವ ಸ್ವಯಂ ಘೋಷಿತ ಆಸ್ತಿತೆರಿಗೆ ಪದ್ಧತಿಯಲ್ಲಿ ಆಸ್ತಿಯ ಮೌಲ್ಯಮಾಪನ ಹಾಗೂ ತೆರಿಗೆ ನಿರ್ಧಾರ ಮಾಡುವ ಪದ್ಧತಿಯಲ್ಲಿ ಅನೇಕ ಅವೈಜ್ಞಾನಿಕ ಅಂಶಗಳು, ವೈರುಧ್ಯಮಗಳು ಮತ್ತು ನ್ಯೂನತೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ